ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

*************************************************************************************

ಸಂಖ್ಯೆ : ಸಿ.ಎಸ್1/ಗಣಕಶಾಖೆ/ಎಸ್.ಎಸ್.ಎಲ್.ಸಿ.ಮೌ.ನೋ.ಅಪ್/01/2021-22 ದಿನಾಂಕ:17/04/2021

**- ಸುತ್ತೋಲೆ -**

**ವಿಷಯ : ಜೂನ್/ಜುಲೈ 2021 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯಕ್ಕಾಗಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ನೋಂದಣಿ ಮಾಡುವ ಬಗ್ಗೆ.**

*****

ಜೂನ್/ಜುಲೈ 2021ರ ಎಸ್.ಎಸ್.ಎಲ್.ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕಾಗಿ ರಾಜ್ಯದ ಎಲ್ಲಾ ಸರ್ಕಾರಿ, ಮಾನ್ಯತೆ ಪಡೆದಿರುವ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಮುಖ್ಯ ಶಿಕ್ಷಕರು ತಮ್ಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು ಮತ್ತು ವಿಷಯ ಶಿಕ್ಷಕರ ವಿವರಗಳನ್ನು ಶಾಲಾ ಲಾಗಿನ್‌ನಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಲು ದಿನಾಂಕ: **19.04.2021** ರಿಂದ ಅವಕಾಶ ಕಲ್ಪಿಸಲಾಗಿದೆ. ಶಾಲೆಯ ಮುಖ್ಯ ಶಿಕ್ಷಕರು ತಮ್ಮನ್ನು ಸೇರಿದಂತೆ ಶಾಲೆಯ ಎಲ್ಲಾ ಶಿಕ್ಷಕರನ್ನು ಮೌಲ್ಯಮಾಪನ ಕಾರ್ಯಕ್ಕೆ ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ ಮತ್ತು 2019-20ನೇ ಸಾಲಿನಲ್ಲಿ ನೋಂದಾಯಿಸಿದ ಶಿಕ್ಷಕರ ವಿವರಗಳನ್ನು ಕೂಡ ಅಪ್‌ಡೇಟ್ ಮಾಡುವುದು ಕಡ್ಡಾಯ.

2020-21ನೇ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ ನೇಮಕಗೊಂಡ, ಬಡ್ತಿ ಮತ್ತು ಮತ್ತು ವರ್ಗಾವಣೆಯಿಂದ ಕರ್ತವ್ಯಕ್ಕೆ ಹಾಜರಾದ ಶಿಕ್ಷಕರ ವಿವರಗಳನ್ನು ಶಾಲಾ ಲಾಗಿನ್ Evaluator Details ನ Evaluators New Registration ನಲ್ಲಿ ನೋಂದಾಯಿಸುವುದು ಹಾಗೂ ಈಗಾಗಲೇ ನೋಂದಾಯಿಸಿರುವ ಮೌಲ್ಯಮಾಪಕರ ವಿವರಗಳನ್ನು ಶಾಲಾ ಲಾಗಿನ್ Evaluator Details ನ Update Evaluators Details ನಲ್ಲಿ ಅಪ್‌ಡೇಟ್ ಮಾಡುವುದು. ಶಾಲೆಯ ಎಲ್ಲಾ ಶಿಕ್ಷಕರ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ದಿನಾಂಕ: **05.05.2021** ರೊಳಗಾಗಿ Evaluator Details ನ Freeze Evalutors Details ನಲ್ಲಿ Freeze ಮಾಡುವುದು. ಮೌಲ್ಯಮಾಪಕರ ವಿವರಗಳನ್ನು Freeze ಮಾಡುವ ಮುನ್ನ ಎಲ್ಲಾ ವಿವರಗಳನ್ನು ಪರಿಶೀಲಿಸಿಕೊಂಡು ಮೌಲ್ಯಮಾಪಕರ ವಿವರಗಳಲ್ಲಿ ಏನಾದರೂ ತಿದ್ದುಪಡಿಗಳಿದ್ದಲ್ಲಿ Evaluator Details ನ Update Evaluators Details ನಲ್ಲಿ ಅಪ್‌ಡೇಟ್ ಮಾಡಿ ನಂತರ Freeze ಮಾಡುವುದು.

2020-21ನೇ ಶೈಕ್ಷಣಿಕ ವರ್ಷದಲ್ಲಿ ತಮ್ಮ ಶಾಲೆಯಿಂದ ವರ್ಗಾವಣೆ, ನಿವೃತ್ತಿ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಶಿಕ್ಷಕರು ಕಾರ್ಯನಿರ್ವಹಿಸುತ್ತಿಲ್ಲವಾದರೆ ಅಂತಹ ಶಿಕ್ಷಕರ ವಿವರಗಳನ್ನು Update Evaluators Details ನಲ್ಲಿ ಸೂಕ್ತ ಕಾರಣಗಳಿಂದ Delete ಮಾಡುವುದು.

ಶಿಕ್ಷಕರನ್ನು ಮೌಲ್ಯಮಾಪನಕ್ಕೆ ನೋಂದಾಯಿಸಿಕೊಳ್ಳುವಾಗ ಇಲ್ಲವೇ ಅಪ್‌ಡೇಟ್ ಮಾಡುವ ಮುನ್ನ ಈ ಕೆಳಗಿನ ವಿವರಗಳನ್ನಿಟ್ಟುಕೊಂಡು ನೋಂದಾಯಿಸುವುದು.

1. ಶಿಕ್ಷಕರ ಹೆಸರು & ಪದನಾಮ
2. ಜನ್ಮ ದಿನಾಂಕ
3. ಸೇವೆಗೆ ಸೇರಿದ ದಿನಾಂಕ
3. ವಿದ್ಯಾರ್ಹತೆ, ಬೋಧನಾ ವಿಷಯ ಮತ್ತು ಮಾಧ್ಯಮ
4. ಪ್ರಥಮ ಕೆ.ಜಿ.ಐ.ಡಿ ಸಂಖ್ಯೆ (ಸರ್ಕಾರಿ ಶಾಲಾ ಶಿಕ್ಷಕರಿಗಾಗಿ). ಉದ್ಯೋಗಿ ಸಂಖ್ಯೆ/ ವಿಮೆ ಪಾಲಿಸಿ ನಂಬರ್ (ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲಾ ಶಿಕ್ಷಕರಿಗಾಗಿ)
5. ಬ್ಯಾಂಕ್ ಖಾತೆಯ ವಿವರಗಳು (ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್)
6. ಶಿಕ್ಷಕರ ಫೋಟೋ ಮತ್ತು ಸಹಿ (ನಿಗದಿತ ಅಳತೆಯಲ್ಲಿ ಸ್ಕ್ಯಾನ್ ಮಾಡಿ ಸೇವ್ ಮಾಡಿ ಇಟ್ಟುಕೊಳ್ಳುವುದು.)

**Photo- (60-80kb) Signature (20-50kb) in jpeg format**

ಮುಖ್ಯ ಶಿಕ್ಷಕರು ಶಿಕ್ಷಕರನ್ನು ನೋಂದಾಯಿಸುವಾಗ ಮೌಲ್ಯಮಾಪನದ ವಿಷಯ ಮತ್ತು ಅವುಗಳ ವಿಷಯ ಸಂಕೇತಗಳನ್ನು ಸರಿಯಾಗಿ ಗಮನಿಸಿಕೊಂಡು ನೋಂದಾಯಿಸುವುದು, ಅಂದರೆ ತಮ್ಮ ಶಾಲೆಯಲ್ಲಿ ಶಿಕ್ಷಕರು ಬೋದಿಸುತ್ತಿರುವ ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆಗಳನ್ನು ಮತ್ತು ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಬೋದನಾ ಮಾಧ್ಯಮವನ್ನು ದೃಢೀಕರಿಸಿಕೊಂಡು ನೋಂದಾಯಿಸುವುದು. ಕಳೆದ ವರ್ಷ ಪ್ರಥಮ ಭಾಷೆ ಕನ್ನಡ (01K) ಶಿಕ್ಷಕರನ್ನು ತೃತೀಯ ಭಾಷೆ (62K) ಕನ್ನಡ ವಿಷಯಕ್ಕೆ, ದ್ವಿತೀಯ ಭಾಷೆ ಇಂಗ್ಲೀಷ್ (31E) ಶಿಕ್ಷಕರನ್ನು ಪ್ರಥಮ ಭಾಷೆ ಇಂಗ್ಲೀಷ್ (14E) ವಿಷಯಕ್ಕೆ ತಪ್ಪಾಗಿ ನೋಂದಾಯಿಸಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ, ಹಾಗಾಗಿ ಮೌಲ್ಯಮಾಪನಕ್ಕೆ ವಿಷಯಗಳನ್ನು ನೋಂದಾಯಿಸುವಾಗ ಬೋದನಾ ವಿಷಯ ಮತ್ತು ಮಾಧ್ಯಮಗಳನ್ನು ಪರಿಶೀಲಿಸಿಕೊಂಡು ನೋಂದಾಯಿಸುವುದು.

NSQF, JTS ಮತ್ತು Alternative ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರನ್ನೂ ಕೂಡ ಜೂನ್/ಜುಲೈ 2021ರ ಮೌಲ್ಯಮಾಪನಕ್ಕೆ ನೊಂದಾಯಿಸುವುದು ಕಡ್ಡಾಯವಾಗಿರುತ್ತದೆ. ತಮ್ಮ ಶಾಲೆಯಲ್ಲಿ NSQF, JTS ಅಥವಾ Alternative ವಿಷಯಗಳನ್ನು ಬೋಧಿಸುತ್ತಿದ್ದಲ್ಲಿ ಅಂತಹ ಶಿಕ್ಷಕರನ್ನು ಕೂಡ ಮೌಲ್ಯಮಾಪನ ಕಾರ್ಯಕ್ಕೆ ನೋಂದಾಯಿಸುವುದು.

ಶಿಕ್ಷಕರ ಮೌಲ್ಯಮಾಪನ ಕಾರ್ಯಕ್ಕಾಗಿ ನೋಂದಾಯಿಸಿದ ನಂತರ ಜನರೇಟ್ ಆಗುವ ಪ್ರತಿ ಶಿಕ್ಷಕರ Evaluator's Individual Registration Reportನ್ನು ಪ್ರತಿ ಶಿಕ್ಷಕರಿಗೆ ನೀಡಿ ವಿವರಗಳನ್ನು ಶಿಕ್ಷಕರಿಂದ ಪರಿಶೀಲಿಸಿಕೊಂಡು, ವಿವರಗಳು ಸಮರ್ಪಕವಾಗಿರುವುದನ್ನು ದೃಢೀಕರಿಸಿಕೊಂಡ ನಂತರ Freeze ಮಾಡುವುದು.

ಜೂನ್/ಜುಲೈ 2021ರ ಎಸ್.ಎಸ್.ಎಲ್.ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕೆ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲಾ ಶಿಕ್ಷಕರು ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ. ಮೌಲ್ಯಮಾಪನ ಕಾರ್ಯಕ್ಕೆ ನೋಂದಾಯಿಸದ ಶಾಲೆಗಳ ಅಂತಿಮ ಪ್ರವೇಶ ಪತ್ರಗಳನ್ನು ತಡೆಹಿಡಿಯಲಾಗುವುದು ಮತ್ತು ಶಿಸ್ತುಕ್ರಮ ಜರುಗಿಸಲಾಗುವುದು.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು
17/4/21

**ಅಗತ್ಯ ಕ್ರಮಕ್ಕಾಗಿ :**

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರು ಈ ಕಾರ್ಯಕ್ಕಾಗಿ ಈಗಾಗಲೇ ನೀಡಿರುವ User Name ಮತ್ತು Password ಗಳನ್ನು ಬಳಸಿಕೊಂಡು ತಮ್ಮ ಎಲ್ಲಾ ಜಿಲ್ಲೆಯ ಎಲ್ಲಾ ಶಾಲೆಗಳು ಮೌಲ್ಯಮಾಪನ ಕಾರ್ಯಕ್ಕೆ ನೋಂದಾಯಿಸಲು ಕ್ರಮವಹಿಸುವುದು.
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ